**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No.228/2023**

ಪಿ**.**ಡಬ್ಲ್ಯೂ**. 1**

ದಿನಾಂಕಃ **25.10.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ನ್ಯಾಯಾಲಯದ ಅನುಮತಿ ಮೇರೆಗೆ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ**.** ಕೆ**.**ಎನ್**.**ಕೆ**.** ವಕೀಲರಿಂದ

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರುತಿಸಲಾಯಿತು**.**

| | |
|---|---|
| ನಿ.ಪಿ.21 | ದಿನಾಂಕ ನಮೂದು ಮಾಡಿಲ್ಲದ ಕಲಂ.64 ಕಾಯ್ದೆ 2013 ರ ಅಡಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಮುಂದೆ ಸಲ್ಲಿಸಿದ ಅರ್ಜಿ |
| ನಿ.ಪಿ.22 | ದಿ.02.05.2022 ರ ವಿಶೇಷ ಭೂ ಸ್ವಾಧೀನಾಧಿಕಾರಿಗಳ ಕಚೇರಿಯಲ್ಲಿ ಸಲ್ಲಿಸಿದ ಹೊಸ ಕಾಯ್ದೆ 2013 ರ ಅನ್ವಯ ಪರಿಹಾರ ಕೋರಿದ ಅರ್ಜಿ |
| ನಿ.ಪಿ.23 | ನಿ.ಪಿ.21 ಮತ್ತು 22 ರೊಂದಿಗೆ ಸಲ್ಲಿಸಿದ 05.05.2022 ವಕಾಲತ್ ನಾಮೆ |
| ನಿ.ಪಿ.24 | ನಿ.ಪಿ.21 ಮತ್ತು 22 ನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳು ಅರ್ಜಿ ಸ್ವೀಕರಿಸಿದ ದಿನಾಂಕ 05.05.2022 ರ ಮೊಹರು ಇರುವ ಅರ್ಜಿ |

ಪಾಟೀ ಸವಾಲು ಃ **1** ನೇ ಎದುರುದಾರರ ಪರವಾಗಿ ಶ್ರೀ**.** ಎಸ್**.**ಆರ್**.** ವಕೀಲರಿಂದ

1. ಸರ್ವೆ ನಂ.34/4 ಮತ್ತು 34/6 ರ ಆಸ್ತಿ ಮೂಲತಃ ನಂಜಪ್ಪ ರವರಿಗೆ ಸೇರಿದ್ದು. ಕಲಂ. 4(1) ಅನ್ವಯ 2013 ರಲ್ಲಿ ನೋಟಿಫಿಕೇಷನ್

ಹೊರಡಿಸಿದ್ದರು. ಹೇಮಾವತಿ ಕುಡಿಯುವ ನೀರಿನ ಯೋಜನೆಗೆ ಸ್ವಾಧೀನಪಡಿಸಿಕೊಂಡ ನನ್ನ ಜಮೀನಿಗೆ ಹೆಚ್ಚಿನ ಪರಿಹಾರ ಕೋರಿ ಕಲಂ.64 ರ ಅನ್ವಯ ಅರ್ಜಿ ಸಲ್ಲಿಸಿದ್ದೇನೆ. ನಿ.ಪಿ.21 ರ ಪರಿಹಾರ ಕೋರಿರುವ ಕಾಲಂ ನಲ್ಲಿ ನಾನು ಕಲಂ.2013ರ ಅನ್ವಯ ಹೆಚ್ಚಿನ ಪರಿಹಾರವನ್ನು ಕೋರಿರುತ್ತೇನೆ. ಯಾವ ಅಂಶಗಳ ಆಧಾರದಲ್ಲಿ ನಾನು ಹೆಚ್ಚಿನ ಪರಿಹಾರ ಕೋರಿರುತ್ತೇನೆ ನಿ.ಪಿ.21 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

2. ನನಗೆ ಅವಾರ್ಡ್ ನೋಟೀಸ್ ಜಾರಿಯಾಗಿಲ್ಲ. ನಿ.ಪಿ.8 ದಿ. 23.02.2018 ರ ನೋಟೀಸ್ ನನಗೆ ಖುದ್ದಾಗಿ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. 2013 ರಲ್ಲಿ ಸ್ವಾಧೀನಗೂಂಡ ಜಮೀನಿನ ಕಂದಾಯ ದಾಖಲಾತಿಗಳು ನಂಜಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಪರಿಹಾರದ ಹಣದ ಚೆಕ್ ನ್ನು ನಾನು ಸ್ವೀಕರಿಸಿದ ಕಾರಣ ನಿ.ಪಿ.21 ರ ಕಲಂ.64 ರ ಅನ್ವಯ ಅರ್ಜಿಯನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳ ಮುಂದೆ ಸಲ್ಲಿಸಿದೆ. ನಿ.ಪಿ.9 ರ ಅನ್ವಯ ದಿ.14.03.2022 ರ ತಿಳುವಳಿಕೆ ಅನ್ವಯ 1 ನೇ ಎದುರುದಾರರಿಂದ ಪಡೆದಿದ್ದೇನೆ. ನಿ.ಪಿ.9 ಸ್ವೀಕರಿಸಿದ 30 ದಿನಗಳ ಒಳಗೆ ನಿ.ಪಿ.21 ಅರ್ಜಿಯನ್ನು 1 ನೇ ಎದುರುದಾರರ ಕಚೇರಿಯಲ್ಲಿ ಹಾಜರುಪಡಿಸಿದ್ದೇನೆ. ನಿ.ಪಿ.21 ಮತ್ತು 23 ನ್ನು ದಿ.02.05.2022 ರಲ್ಲಿ 1 ನೇ ಎದುರುದಾರರ ಕಚೇರಿಯಲ್ಲಿ ಹಾಜರುಪಡಿಸಿದ್ದೇನೆ. ಏಪ್ರಿಲ್ ಮೊದಲ ವಾರ 2022 ರಲ್ಲಿ ನಿ.ಪಿ.9 ನನಗೆ ಜಾರಿಯಾಯಿತು. ದಿ.14.03.2022 ರಲ್ಲಿ ನಾನು ನಿ.ಪಿ.9 ನ್ನು ಸ್ವೀಕರಿಸಿದ್ದೆ

ಎಂದರೆ ಸರಿಯಲ್ಲ. ನಿ.ಪಿ.21 ರಲ್ಲಿ ನಾನು ತಿಳುವಳಿಕೆ ಪತ್ರ ಜಾರಿಯಾದ ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನಿ.ಪಿ.21 ಸಲ್ಲಿಸಿದ 30 ದಿನಗಳ ನಂತರ 1 ನೇ ಎದುರುದಾರರ ಕಚೇರಿಯಲ್ಲಿ ನಾನು ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತಾರೋ ಇಲ್ಲವೋ ಎಂದು ವಿಚಾರಿಸಿರುತ್ತೇನೆ. ನಂತರ ನಾನು ನ್ಯಾಯಾಲಯದಲ್ಲಿ ನನ್ನ ರೆಫರೆನ್ಸ್ ಅರ್ಜಿಯನ್ನು ತರಿಸಿಕೊಳ್ಳುವಂತೆ ಪ್ರತ್ಯೇಕ ಅರ್ಜಿಯನ್ನು ದಾಖಲು ಮಾಡಿರಲ್ಲಿಲ್ಲ ಆದರೆ 1 ನೇ ಎದುರುದಾರರ ಕಚೇರಿಯಲ್ಲಿ ಸಮನ್ಸ್ ಬಂದ ಮೇಲೆ ಹಾಜರಾಗುವಂತೆ ನನಗೆ ತಿಳಿಸಿದ್ದರು.

3. ದಿ.01.04.2024 ರ ನಿ.ಪಿ.13 ಮತ್ತು 14 ಅವಾರ್ಡ್ ನೋಟೀಸ್ ಗಳು ನನಗೆ ಜಾರಿಯಾಗಿರುತ್ತದೆ. ಸರ್ವೇ ನಂ.34/4 ಮತ್ತು 34/6 ರ ಜಮೀನಿನಲ್ಲಿ ಬಿಟ್ಟು ಹೋದ ಸ್ವಾಧೀನಪಡಿಕೊಂಡ ಜಮೀನಿಗೆ ಸಂಬಂದಿಸಿದ ಅವಾರ್ಡ್ ನೋಟೀಸ್ ಎಂದರೆ ಸರಿ . ನಿ.ಪಿ.21 ರ ಅನ್ವಯ ನಾನು ಸಲ್ಲಿಸಿದ್ದ ರೆಫರೆನ್ ಅರ್ಜಿಯಲ್ಲಿ ನಮೂದು ಮಾಡಿದ್ದ ಸ್ವತ್ತು 2013-2014 ರ ಸಾಲಿನಲ್ಲಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದ್ದು ಎಂದರೆ ಸರಿ. ನಿ.ಪಿ.9 ತಿಳುವಳಿಕೆ ಪತ್ರ ಸ್ವೀಕರಿಸಿದ ನಂತರ ನಾನು ಜಮೀನಿನ ಮಾರುಕಟ್ಟೆ ಮೌಲ್ಯಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು 1 ನೇ ಎದುರುದಾರರ ಕಚೇರಿಯಲ್ಲಿ ಹಾಜರುಪಡಿಸಿದ್ದೇನೆ. ಹಾಜರುಪಡಿಸಿದ ಬಗ್ಗೆ ದಾಖಲಾತಿಯನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಸ್ವಾಧೀನಪಡಿಸಿಕೂಂಡ ಜಮೀನಿನ ಮಾರುಕಟ್ಟೆ ಮೌಲ್ಯಕ್ಕೆ ಸಂಬಂಧಿದಂತೆ

ನಾನು ಮತ್ತು ನನ್ನ ಹಿಂದಿನ ಮಾಲೀಕರು ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದ ಕಾರಣ 1ನೇ ಎದುರುದಾರು ಸಂಬಂಧಿಸಿದ ನೊಂದಾಣಾಧಿಕಾರಿಗಳ ಕಚೇರಿಯಿಂದ ಸ್ವೀಕರಿಸಿದ ನೊಂದಾಯಿತ ದಾಖಲಾತಿಗಳ ಅಧಾರದಲ್ಲಿ ಕಲ.26, 2013 ರ ಕಾಯ್ದೆ ಅನ್ವಯ ಪರಿಹಾರದ ಹಣವನ್ನು ನಿಗಧಿಪಡಿಸಿದ್ದರು ಎಂದರೆ ಸರಿಯಲ್ಲ. ನಿ.ಪಿ.13 ಮತ್ತು 14 ರ ಅವಾರ್ಡ್ ನೋಟೀಸ್ ನಲ್ಲಿ ನಮೂದು ಮಾಡಿರುವ ಸ್ವಾದೀನಪಡಿಸಿಕೊಂಡ ಜಮೀನಿಗೆ 2024 ನೇ ವರ್ಷದ ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸಿ ಪರಿಹಾರ ನಿಗಧಿಪಡಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ 2022 ನೇ ವರ್ಷದ ಮಾರುಕಟ್ಟೆ ಮೌಲ್ಯ ಪರಿಗಣಿಸಿದ್ದರು ಎಂದು ನುಡಿದಿರುತ್ತಾರೆ. 2024 ರಲ್ಲಿ ನಿಗಧಿಪಡಿಸಿದ ಮಾರುಕಟ್ಟೆ ಮೌಲ್ಯ 2013-2014 ರ ಸಾಲಿನಲ್ಲಿ ನಿಗಧಿಪಡಿಸಿದ ಮಾರುಕಟ್ಟೆ ಮೌಲ್ಯಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ.

4. ನಿ.ಪಿ.16 ದಿ.24.07.2024 ರಂದು ನೊಂದಾಯಿತವಾದ ಕ್ರಯಪತ್ರ ಎಂದರೆ ಸರಿ. 6 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನಿ.ಪಿ.13, 14 ಮತ್ತು 16 ದಾಖಲಾತಿಗಳು ಪರಿಹಾರ ನಿಗಧಿಪಡಿಸಲು ಪೂರಕ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ. ನಿ.ಪಿ.19 ಮತ್ತು 20 ರ ಅನ್ವಯ 1 ನೇ ಎದುರುದಾರರ ಕಚೇರಿಯ ಅಧಿಕಾರಿಗಳು ಕರಮ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 6 ಗುಂಟೆಗೆ ಸಂಬಂಧಿಸಿದಂತೆ ನಾನು ಪರಿಹಾರ ಸ್ವೀಕರಿಸಿರುತ್ತೇನೆ ಎಂದರೆ ಸರಿಯಲ್ಲ. ಕಾನೂನಿನ್ವಯ 1 ನೇ

ಎದುರುದಾರರು ಪರಿಹಾರ ನಿಗಧಿಪಡಿಸಿದ್ದು ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರಕ್ಕಾಗಿ ನಿ.ಪಿ.21 ಮತ್ತು 23 ಅರ್ಜಿಯಲ್ಲಿ ಸೂಕ್ತ ಕಾರಣಗಳನ್ನು ನಮೂದು ಮಾಡಿಲ್ಲ ಮತ್ತು ಸೂಕ್ತ ದಾಖಲಾತಿಗಳನ್ನು ಸಹಾ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 5. 2018 ರಲ್ಲಿ ಅವಾರ್ಡ್ ನಡೆದಿರುವುದರಿಂದ ನಿಗಧಿತ ಕಾಲಾವಧಿಯಲ್ಲಿ ನಾನು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ನಿ.ಪಿ.21 ಅರ್ಜಿ ಕಾನೂನಿನ್ವಯ ಊರ್ಜಿತವವಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು